**ಪಾಠ–2** **ಜನವರಿ 4–10**

# ಯೆರೂಸಲೇಮಿನಿಂದ ಬ್ಯಾಬಿಲೋನಿಗೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : 2 ಅರಸುಗಳು 21:10–16; ದಾನಿಯೇಲ 1, ಗಲಾತ್ಯ 2:19; ಮತ್ತಾಯ 16:24–26 ಮತ್ತು 2 ಕೊರಿಂಥ 4:17, ಯಾಕೋಬ 1:5.

**ಸ್ಮರಣವಾಕ್ಯ : ಹೀಗಿರಲು ದೇವರು ಆ ನಾಲ್ಕುಮಂದಿ ಯುವಕರಿಗೆ ಸಕಲ ಶಾಸ್ತ್ರಗಳಲ್ಲಿಯೂ ವಿದ್ಯೆಗಳಲ್ಲಿಯೂ ಜ್ಞಾನ ವಿವೇಕಗಳನ್ನು ದಯಪಾಲಿಸಿದನು; ದಾನಿಯೇಲನು ಸಮಸ್ತ ಸ್ವಪ್ನಗಳನ್ನು ದಿವ್ಯದರ್ಶನಗಳನ್ನೂ ಗ್ರಹಿಸುವುದರಲ್ಲಿ ಪ್ರವೀಣನಾದನು (ದಾನಿಯೇಲ 1:17).**

ಸತ್ಯವೇದವು ಪಾಪದಲ್ಲಿ ಬಿದ್ದುಹೋದ ಮನುಷ್ಯನ ದೌರ್ಬಲ್ಯಗಳನ್ನು ತೋರಿಸಿಕೊಡುವುದಕ್ಕೆ ನಾಚಿಕೆಪಡುವುದಿಲ್ಲ. ಆದಿಕಾಂಡ 3ನೇ ಅಧ್ಯಾಯದ ತರುವಾಯ ಮನುಷ್ಯರ ಪಾಪಪೂರ್ಣತೆ ಮತ್ತು ಅದರ ಫಲಿತಾಂಶಗಳನ್ನು ಪ್ರಮುಖವಾಗಿ ಪ್ರದರ್ಶಿಸುತ್ತದೆ. ಅದೇ ಸಮಯದಲ್ಲಿ ನಂಬಿಕೆಯನ್ನು ತೊರೆಯುವಂತೆ ಮಾಡುವ ಎಷ್ಟೇ ಬಲಯುತ ಪ್ರೋತ್ಸಾಹಗಳಿದ್ದಾಗ್ಯೂ ದೇವರಿಗೆ ದೊಡ್ಡ ನಂಬಿಗಸ್ತರಾಗಿ ಉಳಿದಿರುವ ಉದಾಹರಣೆಗಳನ್ನು ಸದಾ ನೋಡುತ್ತೇವೆ. ಮತ್ತು ದಾನಿಯೇಲನ ಪುಸ್ತಕದಲ್ಲಿಯೂ ನಂಬಿಗಸ್ತಿಕೆಗೆ ತೀಕ್ಷ್ಣವಾದ ಕೆಲವು ಉದಾಹರಣೆಗಳನ್ನು ನೋಡುತ್ತೇವೆ.

ಹೇಗೆ ಇದ್ದರೂ ದಾನಿಯೇಲ ಪುಸ್ತಕವನ್ನು ಅಧ್ಯಯನ ಮಾಡುವಾಗ ಅದರ ನಿಜವಾದ ನಾಯಕನು ದೇವರು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳೋಣ. ದಾನಿಯೇಲ ಮತ್ತು ಆತನ ಸ್ನೇಹಿತರ ನಂಬಿಗಸ್ತಿಕೆಗೆ ಪ್ರಾಮುಖ್ಯತೆಯನ್ನು

ಕೊಟ್ಟು ಬ್ಯಾಬಿಲೋನ್ ಸಾಮ್ರಾಜ್ಯದ ಅಧಿಕಾರಕ್ಕೆ ಮತ್ತು ಆಕರ್ಷಣೆಗೆ ಎದುರಾಗಿ ನಿಂತ ಆ ನಾಲ್ಕುಮಂದಿ ಯುವಕರನ್ನು ಉನ್ನತಪಡಿಸಿ ಅವರನ್ನು ಕಾಯ್ದು ಕಾಪಾಡಿದ, ಅವರಿಗೆ ಅಗತ್ಯವಾದ ಮಾರ್ಗದರ್ಶನ ಮಾಡಿದ ದೇವರನ್ನೇ ಮರೆಯುತ್ತೇವೆ. ಅನ್ಯದೇಶದ ಸಂಸ್ಕೃತಿ, ಧರ್ಮಗಳ ಒತ್ತಡವನ್ನು ಒಬ್ಬನೇ ಎದುರಿಸುವಾಗ ಮಾತ್ರವಲ್ಲ ನಮ್ಮ ಸ್ವಂತ ನಾಡಿನಲ್ಲಿ ಮತ್ತು ಸ್ಥಳದಲ್ಲಿಯೇ ನಂಬಿಗಸ್ತರಾಗಿರುವುದಕ್ಕೆ ಸಾಕಷ್ಟು ಸವಾಲುಗಳಿರುತ್ತವೆ. ಆದರೆ ಮನುಷ್ಯ ಮುಖಂಡರು ಈ ಸವಾಲುಗಳನ್ನು ಎದುರಿಸಲು ಸಿದ್ಧರಾಗಿರುತ್ತಾರೆ. ಯಾಕೆಂದರೆ ಅವರು ಅಪೋಸ್ತಲನಾದ ಪೌಲನಂತೆ ತಾವು ನಂಬಿರುವಾತನು ಎಂಥವನೆಂದು ಬಲ್ಲವರಾಗಿರುತ್ತಾರೆ (2 ತಿಮೊಥೆ 1:12) ಮತ್ತು ಭರವಸವಿಡುತ್ತಾರೆ.

ಈ ಪಾಠವನ್ನು ಜನವರಿ 11ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಜನವರಿ 5**

## ದೇವರ ಸಾರ್ವಭೌಮತ್ವ

ಮೊದಲ ನೋಟಕ್ಕೆ ದಾನಿಯೇಲನ ಪುಸ್ತಕದಲ್ಲಿ ದುಃಖಕರವಾದ ಸೋಲಿನ ವಿಷಯವನ್ನು ನೋಡುತ್ತೇವೆ. ಯೂದಾಯವು ನೆಬೂಕದ್ನೆಚ್ಚರನಿಗೆ ಶರಣಾಯಿತು ಮತ್ತು ದೇವಾಲಯದ ಪಾತ್ರೆಗಳನ್ನು ಯೆರೂಸಲೇಮಿನಿಂದ 'ಶಿನಾರ್' ಪ್ರಾಂತ್ಯಕ್ಕೆ ತೆಗೆದುಕೊಂಡು ಹೋದರು. 'ಶಿನಾರ್' ಎಂಬ ಪದವನ್ನು ಆದಿಕಾಂಡ 11:2 ರಲ್ಲಿ ನೋಡುತ್ತೇವೆ. ಇದು ಬಾಬೆಲ್ ಗೋಪುರದ ಸ್ಥಳ. ದೇವರಿಗೆ ಮುಕ್ತವಾಗಿ ಸವಾಲೆಸದ ಸ್ಥಳವಾದ ಕಾರಣ 'ಶಿನಾರ್' ಒಂದು ಅಶುಭವಾದ ಚಿಹ್ನೆಯಾಗಿತ್ತು. ಬಾಬೆಲ್ ಗೋಪುರವನ್ನು ಕಟ್ಟುತ್ತಿದ್ದವರು ಪರಲೋಕವನ್ನು ಮುಟ್ಟುವ ಪ್ರಯತ್ನದಲ್ಲಿ ವಿಫಲರಾದರು. ಹೊರನೋಟಕ್ಕೆ ನೆಬೂಕದ್ನೆಚ್ಚರನು ಮತ್ತು ಆತನ ದೇವತೆಗಳು 'ಶಿನಾರ್'ನಲ್ಲಿ ಸ್ಥಾಪಿತವಾಗಿದ್ದು ಇಸ್ರಾಯೇಲ್ಯರ ಒಡಂಬಡಿಕೆಯ ದೇವರನ್ನು ಮೀರಿಸಿದಂತೆ ತೋರುತ್ತಿತ್ತು.

ದಾನಿಯೇಲ ಪುಸ್ತಕದ ಆರಂಭದ ಸಾಲುಗಳು ಯೆರೂಸಲೇಮಿನ ಮೇಲೆ ಸಾಧಿಸಿದ ಯಶಸ್ಸು ಬಲಾಢ್ಯನಾದ ಬ್ಯಾಬಿಲೋನ್ ರಾಜನಿಗೆ ಸಲ್ಲುವುದಿಲ್ಲ ಎಂಬುದನ್ನು ಕರ್ತನು ಯೆಹೂದದ ಅರಸನಾದ ಯೆಹೋಯಾಕೀಮನನ್ನು

ದೇವಾಲಯದ ಅನೇಕ ಪಾತ್ರೆಗಳನ್ನು ನೆಬೂಕದ್ನೆಚ್ಚರನ ಕೈಗೆ ಒಪ್ಪಿಸಿದದೇ ಕಾರಣ (ದಾನಿ 1:2). ಜನರು ತನ್ನನ್ನು ಮರೆತು ಒಡಂಬಡಿಕೆಯನ್ನು ಮುರಿದು ಹಾಕಿದರೆ ಅವರನ್ನು ಅನ್ಯದೇಶದವರಿಗೆ ಸೆರೆಯಾಳುಗಳಾಗಿ ಮಾಡುತ್ತೇನೆಂದು ದೇವರು ಹೇಳುತ್ತಾನೆ. ಆದುದರಿಂದ ದಾನಿಯೇಲನಿಗೆ ನೆಬೂಕದ್ನೆಚ್ಚರನ ಸೇನೆಯ ಬಲದ ಹಿಂದೆ ಮತ್ತು ಅದರಾಚೆಗೆ ಪರಲೋಕದ ದೇವರು ಚರಿತ್ರೆಯ ನಡೆಯನ್ನು ಮುನ್ನಡೆಸುತ್ತಿದ್ದಾನೆಂದು  ತಿಳಿದುಕೊಂಡನು.

ದೇವರ ಸರ್ವಾಧಿಕಾರವು ಆ ನಾಲ್ಕು ಯೌವನಸ್ಥರನ್ನು ಉಳಿಸಿ ಅವರಿಗೆ ಬ್ಯಾಬಿಲೋನ್ ಸಾಮ್ರಾಜ್ಯದ ಒತ್ತಡ ಮತ್ತು ಶೋಧನೆಗಳನ್ನು ಜೈಸಲು ಧೈರ್ಯ ಕೊಟ್ಟಿತು. ಓದಿರಿ : 2 ಅರಸುಗಳು 21:10–16, 2 ಅರಸುಗಳು 24:18–20 ಮತ್ತು ಯೆರೆಮೀಯ 3:13. ದೇವರು ಯೆಹೂದ್ಯರನ್ನು ಯೆರೂಸಲೇಮನ್ನೂ ಬ್ಯಾಬಿಲೋನಿಯನ್ನರ ಕೈಗೆ ಏಕೆ ಒಪ್ಪಿಸಿದನು?

ನಾವು 21ನೇ ಶತಮಾನದ ಸವಾಲುಗಳನ್ನು ಎದುರಿಸುವವರಾಗಿ ದಾನಿಯೇಲ ಪುಸ್ತಕದಲ್ಲಿ ಸ್ಪಷ್ಟವಾಗಿ ಬಿಂಬಿತವಾಗಿರುವ ದೇವರ ಗ್ರಹಿಕೆಯನ್ನು ಜ್ಞಾಪಕ ಮಾಡಿಕೊಳ್ಳುವ ಅಗತ್ಯವಿದೆ. ಈ ಪುಸ್ತಕದ ಪ್ರಕಾರ ನಾವು ಸೇವಿಸುತ್ತಿರುವ ದೇವರು ಚರಿತ್ರೆಯ ಸೇನೆಯನ್ನು ತನ್ನ ಅಧಿಕಾರದಿಂದ ಮುನ್ನಡೆಸುವನು ಮಾತ್ರವಾಗಿರದ ತನ್ನ ಜನರಿಗೆ ಸಹಾಯದ ಅಗತ್ಯವಾದಾಗಲೆಲ್ಲ ಅವರ ಜೀವನದಲ್ಲಿ ಕರುಣೆಯಿಂದ ಮಧ್ಯೆ ಪ್ರವೇಶ ಮಾಡುವವನಾಗಿರುತ್ತಾನೆ. ದೇವರು ಸೆರೆಹೋದ ಇಬ್ರಿಯವರಿಗೆ ಏನು ಮಾಡಿದನೋ ಅದೇ ಪ್ರಕಾರವಾಗಿ ಅಂತ್ಯಕಾಲದಲ್ಲಿರುವ ತನ್ನ ಜನರಿಗೂ ಸಹಾ ಮಾಡುವವನಾಗಿರುತ್ತಾನೆ.

ನಿಮ್ಮ ನಂಬಿಕೆಯು ಎದುರಿಸುತ್ತಿರುವ ಕೆಲವು ಸಮಸ್ಯೆಗಳಾವುವು? ಹೊರಗಡೆಯ ಮೂಲಗಳಿಂದಾಗಲಿ ಸಭೆಯ ಒಳಗಡೆಯಿಂದಾಗಲಿ ಅಥವಾ ನಿಮ್ಮ ಸ್ವಂತ ಗುಣಸ್ವಭಾವದಲ್ಲಿಯಾಗಲಿ ನೀವು ಎದುರಿಸುತ್ತಿರುವ ಕೆಲವು ಸವಾಲುಗಳಾವುವು? ನಿಮ್ಮ ಮುಂದಿರುವುದನ್ನು ಗೆಲ್ಲುವುದಕ್ಕೆ ಬೇಕಾಗಿರುವ ಸಹಾಯಕ್ಕಾಗಿ ದೇವರ ಶಕ್ತಿಯ ಮೇಲೆ ಆತುಕೊಳ್ಳುವುದನ್ನು ಹೇಗೆ ಕಲಿಯುವಿರಿ?

**ಸೋಮವಾರ** **ಜನವರಿ 6**

## ಒತ್ತಡದಡಿಯಲ್ಲಿರುವ ನಂಬಿಕೆ

ಓದಿರಿ : ದಾನಿಯೇಲ 1ನೇ ಅಧ್ಯಾಯ. ಈ ಯೌವನಸ್ಥರ ಮೇಲೆ ಎಂತಹ ಒತ್ತಡಗಳು ಬಂದವು?

ಬ್ಯಾಬಿಲೋನಿಗೆ ತಲುಪಿದಾಗ ಈ ನಾಲ್ಕುಮಂದಿ ಯೌವನಸ್ಥರ ನಂಬಿಕೆಗಳಿಗೆ ಮತ್ತು ನಿರ್ಧಾರಗಳಿಗೆ ಬಹಳ ಗಂಭೀರವಾದ ಸವಾಲುಗಳು ಎದುರಾದವು. ಅವರು ರಾಜನನ್ನು ಸೇವಿಸಲು ಅಗತ್ಯವಾದ ವಿಶೇಷ ತರಬೇತಿಗೆ ಒಳಗಾದರು. ಹಳೆಯ ಕಾಲದಲ್ಲಿ ರಾಜರು ಸೆರೆಯಾಗಿ ತಂದವರಲ್ಲಿ ಉತ್ತಮವಾದವರು ಅರಮನೆಯಲ್ಲಿ ಸೇವೆ ಮಾಡುವ ಕೆಲಸಕ್ಕೆ ನೇಮಿಸಲ್ಪಡುತ್ತಿದ್ದರು. ಹಾಗೆ ನೇಮಕವಾದವರು ತಮ್ಮ ನಿಷ್ಠೆಯನ್ನು ರಾಜರಿಗೂ ಮತ್ತು ಆ ರಾಜ್ಯದ ದೇವರಿಗಳಿಗೂ ಬದಲಾಯಿಸಿಕೊಳ್ಳಬೇಕಾಗಿತ್ತು. ನಿಜವಾಗಿಯೂ ಈ ಪೂರ್ಣ ಪ್ರಕ್ರಿಯೆಯ ಉದ್ದೇಶವು ಲೋಕಾಭಿಪ್ರಾಯ ಬದಲಾಯಿಸುವ ಪರಿವರ್ತನೆ ಮತ್ತು ಮಿಥ್ಯಬೋಧನೆ ಆಗಿತ್ತು. ಈ ಪ್ರಕ್ರಿಯೆಯ ಭಾಗವಾಗಿ ಯೆಹೂದ್ಯ ಸೆರೆಯಾಳುಗಳ ಹೆಸರುಗಳು ಬದಲಾಯಿಸಲ್ಪಟ್ಟವು. ಹೊಸಹೆಸರು ಮಾಲೀಕತ್ವದ ಮತ್ತು ಅವರ ಗತಿಸ್ಥಾಪನೆಯ ಬದಲಾವಣೆಯನ್ನು ಸಂಕೇತಿಸುತ್ತದೆ. ಹಾಗಾಗಿ, ಸೆರೆಯಾಳುಗಳಿಗೆ ಬ್ಯಾಬಿಲೋನಿಯನ್ನರು ತಮ್ಮ ಅಧಿಕಾರವನ್ನು ಅವರ ಮೇಲೆ ದೃಢಪಡಿಸಿ ತಮ್ಮ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ಅರಗಿಸಿಕೊಳ್ಳುವಂತೆ ಅವರನ್ನು ಒತ್ತಾಯ ಪಡಿಸುವ ಉದ್ದೇಶದಿಂದ ಮರುನಾಮಕರಣ ಮಾಡುತ್ತಿದ್ದರು. ಅವರ ಮೊದಲ ಹೆಸರುಗಳು ಇಸ್ರಾಯೇಲ್ಯರ ದೇವರ ಕಡೆಗೆ ನಿರ್ದೇಶಿಸುತ್ತಿದ್ದವು. ಈವಾಗ ಅನ್ಯದೇವತೆಗಳ ಗೌರವಕ್ಕಾಗಿ ಹೆಸರುಗಳನ್ನು ಬದಲಾಯಿಸಿದರು. ಇದರೊಂದಿಗೆ ರಾಜನು ತನ್ನ ಮೇಜಿನಿಂದ ಒದಗಿಸಿದ ಆಹಾರವನ್ನು ಆ ಯೌವನಸ್ಥರು ಸೇವಿಸಬೇಕೆಂದು ನಿರ್ಧರಿಸುತ್ತಿದ್ದನು. ಹಳೆಯ ಕಾಲದಲ್ಲಿ ರಾಜನ ಮೇಜಿನಿಂದ ಒದಗುವ ಆಹಾರವನ್ನು ಸೇವಿಸುವುದು ಆಳವಾದ ಪರಿಣಾಮ ಹೊಂದಿತ್ತು. ರಾಜನಿಗೆ ಪರಿಪೂರ್ಣವಾದ ನಿಷ್ಠೆಯನ್ನು ಮತ್ತು ಅವನ ಮೇಲಿನ ಅವಲಂಬನೆಯನ್ನು ಇದು ಅರ್ಥೈಸುತ್ತದೆ. ಸಾಮಾನ್ಯವಾಗಿ ಆಹಾರವನ್ನು ಆ ರಾಜ್ಯದ ದೇವತೆಗೆ ಅಥವಾ ದೇವತೆಗಳಿಗೆ ಅರ್ಪಿಸುತ್ತಿದ್ದರಿಂದ ಅದನ್ನು

ಸೇವಿಸುವುದು ಆಳವಾದ ಧಾರ್ಮಿಕ ಅರ್ಥವನ್ನು ಹೊಂದಿತ್ತು. ಇದು ರಾಜನ ಆರಾಧನಾ ಕ್ರಮವನ್ನು ಅಂಗೀಕರಿಸಿ ಅದರಲ್ಲಿ ಪಾಲ್ಗೊಳ್ಳುವುದನ್ನು ವಿಷದವಾಗಿ ಅರ್ಥೈಸುತ್ತಿತ್ತು. ಹಾಗಾಗಿ ದಾನಿಯೇಲ ಮತ್ತು ಆತನ ಸ್ನೇಹಿತರು ತಮಗೆ ಸವಾಲೊಡ್ಡುವ ಸನ್ನಿವೇಶದಲ್ಲಿ ಸಿಲುಕಿಕೊಂಡರು.

ದೇವರಿಗೆ ನಿಷ್ಠರಾಗಿ ಉಳಿದು ಸಾಮ್ರಾಜ್ಯಶಾಹಿಯ ಅಗಾಧವಾದ ಶಕ್ತಿಯಿಂದ ಬದುಕುಳಿಯುವುದಕ್ಕೆ ಅದ್ಭುತಕ್ಕಿಂತ ಕಡಿಮೆಯಾದದು ಜರುಗಿದ್ದರೆ ಸಾಧ್ಯವಾಗುತ್ತಿರಲಿಲ್ಲ. ವಿಷಯವನ್ನು ಇನ್ನೂ ಸಂಕೀರ್ಣ ಮಾಡುವುದಕ್ಕೆಂಬಂತೆ ಬ್ಯಾಬಿಲೋನ್ ಪಟ್ಟಣವು ತನ್ನಷ್ಟಕ್ಕೆ ಮಾನವ ಸಾಧನೆಗೆ ಸ್ಮಾರಕದಂತೆ ನಿಂತಿತ್ತು. ಶಿಲ್ಪಕಲಾ ಸೌಂದರ್ಯವನ್ನು ಹೊಂದಿದ್ದ ಬ್ಯಾಬಿಲೋನ್ ದೇವಾಲಯಗಳು ತೂಗಾಡುವ ತೋಟಗಳು, ಪಟ್ಟಣದೆಡೆಗೆ ಹೊರಳಿ ಹರಿಯುತ್ತಾ ಯಾರು ಮೀರಿಸಲಾಗದ ಪರಾಕ್ರಮ ಮತ್ತು ವೈಭವದ ಪ್ರತೀಕವಾದ ಯೂಫ್ರೆಟಿಸ್. ಹಾಗಾಗಿ ದಾನಿಯೇಲ ಮತ್ತು ಅವನ ಸ್ನೇಹಿತರು ಪದೋನ್ನತಿ ಪಡೆದು ಆ ವ್ಯವಸ್ಥೆಯ ಸಮೃದ್ಧಿಯನ್ನು ಸೌಲಭ್ಯಗಳನ್ನು ಅನುಭವಿಸುವ ಅವಕಾಶಗಳಿದ್ದವು. ಅವರು ಯೆಹೂದ್ಯ ಸೆರೆಯಾಳುಗಳಾಗದೆ ರಾಜಾಧಿಕಾರಿಗಳಾಗಿ ಹೊರಹೊಮ್ಮುತ್ತಿದ್ದರು. ಸುಲಭವಾದ ಮತ್ತು ವೈಭವದ ಮಾರ್ಗವನ್ನು ತುಳಿಯುವುದಕ್ಕೋಸ್ಕರ ಅವರು ತಮ್ಮ ಸಿದ್ಧಾಂತಗಳಿಗೆ ರಾಜಿಯಾದರೇನು?

ತಮ್ಮ ದೃಢನಿರ್ಣಯಗಳಿಗೆ ರಾಜಿಯಾಗುವುದಕ್ಕೋಸ್ಕರ ಈ ಹುಡುಗರು ಯಾವ ರೀತಿಯಲ್ಲಿ ನಿರ್ಧಾರಗಳನ್ನು ತರ್ಕಬದ್ಧ ಮಾಡಬಹುದಿತ್ತು? ಯಾವ ರೀತಿಯಲ್ಲಿ ನೀವು ಸಹ ಈವಾಗ ಇವರಂತೆಯೇ ಮಾರ್ಮಿಕವಾದ ಸವಾಲುಗಳನ್ನು ಎದುರಿಸುತ್ತಿರುವಿರಿ?

**ಮಂಗಳವಾರ** **ಜನವರಿ 7**

## ದೃಢಸಂಕಲ್ಪ

**ಓದಿರಿ:** ದಾನಿಯೇಲ 1:7–20. ಎರಡು ಸಂಗತಿಗಳು ಕೆಲಸ ಮಾಡುತ್ತಿರುವುದನ್ನು ಕಾಣುತ್ತೇವೆ. ದಾನಿಯೇಲನ ಆಯ್ಕೆ ಸ್ವಾತಂತ್ರ್ಯ ಮತ್ತು ದೇವರ ಮಧ್ಯಸ್ಥಿಕೆ. ಯಾವ ಪ್ರಮುಖವಾದ ನಿಯಮ ಇಲ್ಲಿ ಅಸ್ತಿತ್ವದಲ್ಲಿದೆ?

ಈ ನಾಲ್ಕು ಯೌವನಸ್ಥರು ಬ್ಯಾಬಿಲೋನಿನ ಹೆಸರುಗಳಿಗೆ ಯಾವ ಆಕ್ಷೇಪಣೆಯನ್ನು ವ್ಯಕ್ತಪಡಿಸಲಿಲ್ಲವೆಂದು ತೋರುತ್ತದೆ. ಅವರು ತಮ್ಮ ಇಬ್ರಿಯ ಹೆಸರುಗಳನ್ನು ತಾವು ಬಳಸುವುದನ್ನು ಬಿಟ್ಟು ಅದರ ಬಗ್ಗೆ ಯಾವುದನ್ನು ಮಾಡಲಾಗದ ಸಾಧ್ಯತೆ ಹೆಚ್ಚಾಗಿತ್ತು. ಆದರೆ ರಾಜನ ಮೇಜಿನಿಂದ ಒದಗುವ ಆಹಾರ ಮತ್ತು ಪಾನದ ವಿಷಯದಲ್ಲಿ ಅದನ್ನು ಸೇವಿಸುವ ಇಲ್ಲವೇ ಬಿಡುವ ಅಧಿಕಾರ ಅವರಲ್ಲಿಯೇ ಇತ್ತು. ಹಾಗಾಗಿ ಆ ನಾಲ್ಕು ಜನರ ಮುಕ್ತ ಆಯ್ಕೆ ಇಲ್ಲಿ ಬಹಳ ಮುಖ್ಯವಾಗಿತ್ತು. ಏನೇ ಆಗಲಿ ಒಬ್ಬ ಅಧಿಕಾರಿಯು ಅವರ ಹೆಸರುಗಳನ್ನು ಬದಲಿಸುವುದಾದರೆ ಅವರ ಆಹಾರಕ್ರಮವನ್ನು ಬದಲಿಸಬಹುದಿತ್ತು. ಆ ನಾಲ್ವರು ರಾಜನ ಮೇಜಿನಿಂದ ಒದಗುವ ಆಹಾರವನ್ನು ತಿನ್ನಬಾರದೆಂಬುದಕ್ಕೆ ಎರಡು ಕಾರಣಗಳಿರುವಂತೆ ತೋರುತ್ತದೆ.

ಮೊದಲನೆಯದು, ರಾಜನ ಮೇಜಿನಿಂದ ಒದಗಿ ಬರುತ್ತಿದ್ದ ಆಹಾರದಲ್ಲಿ ಅಶುದ್ಧ ಪ್ರಾಣಿಯ ಮಾಂಸವಾಗಿರುತ್ತಿತ್ತು (ಯಾಜಕಕಾಂಡ 11ನೇ ಅಧ್ಯಾಯ). ಎರಡನೆಯದು, ಆಹಾರವನ್ನು ಮೊದಲು ವಿಗ್ರಹಕ್ಕೆ ಅರ್ಪಿಸಿ ನಂತರ ರಾಜನಿಗೆ ಕಳುಹಿಸುತ್ತಿದ್ದರು. ಹಾಗಾಗಿ ದಾನಿಯೇಲನು ಯಾವ ಮೋಸದ ಕುಯುಕ್ತಿಕ ನೆಪಗಳನ್ನು ಕೈಗೊಳ್ಳದೆ ಧಾರ್ಮಿಕಕಾರಣಗಳಿಗೆ (ಅರಮನೆಯ ಆಹಾರ ಅವನನ್ನು ಅವನ ಸ್ನೇಹಿತರನ್ನು ಅಶುದ್ಧಗೊಳಿಸುತ್ತಿತ್ತು) (ದಾನಿ 1:8). ಧೈರ್ಯವಂತನಾಗಿ ಸ್ಪಷ್ಟಪಡಿಸಿದನು.

ದಾನಿಯೇಲ ಮತ್ತು ಅರಮನೆಯ ಅಧಿಕಾರಿಯ ಜೊತೆ ನಡೆದ ಸಂವಾದವನ್ನು ಗಮನಿಸಿದಾಗ ಕೆಲವು ಮುಖ್ಯವಾದ ಅಂಶಗಳು ಎದ್ದುಕಾಣುತ್ತವೆ. ಮೊದಲನೆಯದಾಗಿ ದಾನಿಯೇಲನಿಗೆ ಆ ಅಧಿಕಾರಿಗಿದ್ದ ಕಷ್ಟದ ಪರಿಸ್ಥಿತಿಯ ಅರಿವಿತ್ತು, ಹಾಗಾಗಿ ದಾನಿಯೇಲನು ಒಂದು ಪರೀಕ್ಷೆಯನ್ನು ಸೂಚಿಸಿದನು. ಹತ್ತುದಿನಗಳ ಮಟ್ಟಿಗೆ ಸೇವನೆ ಮಾಡಿದ ಪರ್ಯಾಯವಾದ ಆಹಾರವು ಅದರ ಅಧಿಕಾರಿಯ ಭಯವನ್ನು ದೂರವಾಗಿಸಿತ್ತು. ಎರಡನೆಯದಾಗಿ ಅಷ್ಟು ಅಲ್ಪಕಾಲದಲ್ಲಿಯೇ ಆತನ ಆಹಾರಪದ್ಧತಿಯ ಸಕಾರಾತ್ಮಕ ಫಲಿತಾಂಶ ಕೊಟ್ಟಿದ್ದಕ್ಕೆ ದಾನಿಯೇಲನಿಗಿದ್ದ ಖಚಿತತೆ ದೇವರ ಮೇಲೆ ಅವನು ಇಟ್ಟಿದ್ದ ಪೂರ್ಣವಾದ

ನಂಬಿಕೆಯೇ ಕಾರಣ. ಮೂರನೆಯದಾಗಿ, ಕಾಯಿಪಲ್ಯೆ ಮತ್ತು ನೀರಿನ ಆಹಾರಕ್ರಮವು ಆದಿಯಲ್ಲಿ ದೇವರು ಆದಾಮ ಮತ್ತು ಹವ್ವಳಿಗೆ ಕೊಟ್ಟಿದ್ದಾಗಿತ್ತು (ಆ.ಕಾಂಡ 1:29). ಇದು ದಾನಿಯೇಲನು ಮಾಡಿಕೊಂಡ ಆಯ್ಕೆ ಮೇಲೆ ಪ್ರಭಾವಬೀರಿದ ಅಂಶವಾಗಿರುತ್ತದೆ. ಇದೆಲ್ಲದರ ಬಳಿಕ, ದೇವರು ಆದಿಯಲ್ಲಿ ಕೊಟ್ಟ ಆಹಾರಕ್ಕಿಂತ ಉತ್ತಮವಾದ ಆಹಾರ ಯಾವುದಾಗಿರಲು ಸಾಧ್ಯ?

ದೇವರಿಗೆ ಹಾಗೆ ಮಾಡುವುದಕ್ಕೆ ಮಾರ್ಗವನ್ನು ತೆರೆದ ದಾನಿಯೇಲನ ಉಚಿತ ಆಯ್ಕೆಯ ಬಗ್ಗೆ ಅಷ್ಟು ಮುಖ್ಯವಾದುದೇನು? (ದಾನಿ 1:9)?

ನಮ್ಮ ಆಯ್ಕೆಯ ಪ್ರಾಮುಖ್ಯತೆಗಳಿಂದ ಯಾವ ಪಾಠವನ್ನು ನಾವು ಕಲಿಯಬಹುದು? ನಾವು ದೇವರಲ್ಲಿ ಇಟ್ಟಿರುವ ನಂಬಿಕೆಯು ನಾವು ಮಾಡುವ ಆಯ್ಕೆಗಳ ಮೇಲೆ ಪರಿಣಾಮ ಬೀರುತ್ತದೆ ಹೇಗೆ?

**ಬುಧವಾರ** **ಜನವರಿ 8**

## ನಿಷ್ಕಳಂಕರು ಮತ್ತು ಬುದ್ಧಿವಂತರು

ದಾನಿಯೇಲ ಮತ್ತು ಆತನ ಸ್ನೇಹಿತರು ರಾಜಸೇವೆಗೆ ಆಯ್ಕೆಯಾದರು. ಯಾಕೆಂದರೆ ರಾಜನಾದ ನೆಬೂಕದ್ನೆಚ್ಚರನು ಸ್ಥಾಪಿಸಿದ ಆಡಳಿತದ ಚೌಕಟ್ಟಿನೊಳಕ್ಕೆ ಅವರು ಸರಿಹೊಂದುತ್ತಿದ್ದರು. ರಾಜನ ಅಪೇಕ್ಷೆಯಂತೆ ಅರಮನೆಯ ಅಧಿಕಾರಿಗಳು ಅಂಗದೋಷವಿಲ್ಲದವರೂ ಸುಂದರರೂ ಆಗಿರಬೇಕಾಗಿತ್ತು (ದಾನಿ 1:4). ದೇವದರ್ಶನ ಗುಡಾರದಲ್ಲಿ ಕೆಲಸ ಮಾಡುವ ಯಾಜಕರು ಮತ್ತು ಯಜ್ಞಕ್ಕೆ ಅರ್ಪಿಸಿದ ಪಶುಗಳಿಗೆ 'ಅಂಗದೋಷ'ವಿರಬಾರದು (ಯಾ.ಕಾಂಡ 22:17–25 ಮತ್ತು 21:16–24). ತನ್ನನ್ನು ಸೇವಿಸುವವರು ಅರ್ಹರಾಗಿರಬೇಕೆಂದು ದೇವರು ಬಯಸಿದಂತೆ ಬ್ಯಾಬಿಲೋನಿನ ರಾಜನು ಅರಮನೆಯ ಸೇವಕರ ವಿಷಯದಲ್ಲಿ ತನ್ನನ್ನು ಇಸ್ರಾಯೇಲ್ಯರ ದೇವರಿಗೆ ಹೋಲಿಸಿಕೊಂಡಂತೆ ಕಾಣಿಸುತ್ತಾನೆ. ಬ್ಯಾಬಿಲೋನಿನ ಸವಾಲುಗಳನ್ನು ಎದುರಿಸುವ ಸಂದರ್ಭದಲ್ಲಿ ದಾನಿಯೇಲ ಮತ್ತು ಸ್ನೇಹಿತರು ತಮ್ಮನ್ನು ದೇವರಿಗೆ ಸಜೀವ ಯಜ್ಞಗಳಂತೆ ಅರ್ಪಿಸಿಕೊಳ್ಳುವುದನ್ನು ಅರ್ಹತೆಗಳು ಸೂಚಿಸುತ್ತಿದ್ದವು.

ಓದಿರಿ : ಗಲಾತ್ಯ 2:19,20, ಮತ್ತಾಯ 16:24–26 ಮತ್ತು 2 ಕೊರಿಂಥ 4:17. ನಾವು ಎಂತಹ ಶೋಧನೆಗಳನ್ನು ಎದುರಿಸುತ್ತಿದ್ದರೂ ನಂಬಿಗಸ್ತರಾಗಿ ಉಳಿಯಬಹುದೆಂಬುದಕ್ಕೆ ಈ ವಚನಗಳು ಏನನ್ನು ಹೇಳುತ್ತವೆ?

ದೇವರು ಈ ಯೆಹೂದ್ಯ ಸೆರೆಯಾಳುಗಳ ನಿಷ್ಠೆಯನ್ನು ಗೌರವಿಸುತ್ತಾನೆ ಎಂತಲೇ ಹತ್ತುದಿನಗಳ ಬಳಿಕ ರಾಜನ ಮೇಜಿನಿಂದ ಆಹಾರ ಸೇವಿಸಿದವರಿಗಿಂತ ಹೆಚ್ಚಾಗಿ ಸುಂದರವಾಗಿಯೂ ಪುಷ್ಟರಾಗಿಯೂ ಕಾಣಿಸುತ್ತಿದ್ದರು. ಹೀಗಿರಲು ದೇವರು ಆ ನಾಲ್ಕು ಮಂದಿ ಯುವಕರಿಗೆ ಸಕಲಶಾಸ್ತ್ರಗಳಲ್ಲಿಯೂ ವಿದ್ಯೆಗಳಲ್ಲಿಯೂ ಜ್ಞಾನವಿವೇಕಗಳನ್ನು ದಯಪಾಲಿಸಿದನು; ದಾನಿಯೇಲನು ಸಮಸ್ತ ಸ್ವಪ್ನಗಳನ್ನೂ, ದಿವ್ಯದರ್ಶನಗಳನ್ನೂ ಗ್ರಹಿಸುವುದರಲ್ಲಿ ಪ್ರವೀಣನಾದನು (ದಾನಿ 1:17). ಈ ವರವು ದಾನಿಯೇಲನಿಗೆ ಪ್ರವಾದನಾ ಸೇವೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿತು. ಬ್ಯಾಬಿಲೋನಿನ ಆಸ್ಥಾನದಲ್ಲಿದ್ದ ತನ್ನ ಸೇವಕರ ನಂಬಿಕೆಯನ್ನು ಗೌರವಿಸಿದಂತೆ ಈ ಲೋಕದ ಸವಾಲುಗಳನ್ನು ಎದುರಿಸುವಾಗ ನಮಗೂ ಜ್ಞಾನವನ್ನು ನೀಡುತ್ತಾನೆ. ದಾನಿಯೇಲ ಮತ್ತು ಸ್ನೇಹಿತರ ಅನುಭವಗಳಿಂದ ನಾವು ಸಹ ಭ್ರಷ್ಟ ಸಮಾಜದ ಮಧ್ಯೆ ಇದ್ದರೂ ನಿಷ್ಕಳಂಕರಾಗಿ ಉಳಿಯಬಹುದು ಎಂಬುದನ್ನು ಕಲಿಯುತ್ತೇವೆ. ದೇವರನ್ನು ಸೇವಿಸುವ ಸಲುವಾಗಿ ನಾವು ಈ ಸಮಾಜದ ಸಂಸ್ಕೃತಿಯಿಂದ ನಮ್ಮನ್ನು ನಾವು ದೂರ ಮಾಡಿಕೊಳ್ಳಬೇಕೆಂಬ ಅಗತ್ಯವಿರುವುದಿಲ್ಲವೆಂಬುದನ್ನು ಸಹ ಕಲಿಯುತ್ತೇವೆ. ದಾನಿಯೇಲ ಮತ್ತು ಅವನ ಸ್ನೇಹಿತರು ಕೇವಲ ಸುಳ್ಳುಗಳಿಂದಲೂ ತಪ್ಪುಗಳಿಂದಲೂ ಕಲ್ಪನಾ ಕಥೆಗಳ ಮೇಲೆಯೂ ಕಟ್ಟಿದ ಸಂಸ್ಕೃತಿಯ ಮಧ್ಯದಲ್ಲಿ ವಾಸಿಸುವವರು ಮಾತ್ರವಾಗಿರದೆ ಅವುಗಳನ್ನು ತಮ್ಮ ಶಿಕ್ಷಣದಲ್ಲಿ ಕಲಿತೂ ಸಹಾ ನಂಬಿಗಸ್ಥರಾಗಿ ಉಳಿಯಬಹುದೆಂಬುದಕ್ಕೆ ಉದಾಹರಣೆಯಾಗಿದ್ದಾರೆ.

ನಾವು ನಮ್ಮ ನಂಬಿಗಸ್ತರಾಗಿ ಜೀವಿಸಲು ಸವಾಲೊಡ್ಡುವ ಪ್ರಭಾವವನ್ನು ಬೀರುವ ಸಂಸ್ಕೃತಿಗಳ ನಡುವೆ ಜೀವಿಸುತ್ತಿದ್ದರೂ ನಾವು ಎಲ್ಲಿ ಜೀವಿಸುತ್ತಿದ್ದೇವೆ ಅದು ಮುಖ್ಯವಲ್ಲ. ನಿಮ್ಮ ಸಂಸ್ಕೃತಿಯಲ್ಲಿರುವ ನಕರಾತ್ಮಕ ಪ್ರಭಾವಗಳನ್ನು ಗುರುತು ಮಾಡಿ ಅವುಗಳನ್ನು ಎಷ್ಟು ಚೆನ್ನಾಗಿ ಎದುರಿಸಬಹುದು?

**ಗುರುವಾರ** **ಜನವರಿ 9**

# ಅಂತಿಮ ಪರೀಕ್ಷೆ

ಓದಿರಿ : ದಾನಿ 1:17–21, ನಾಲ್ಕು ಯೆಹೂದ್ಯರ ಯಶಸ್ಸಿಗೆ ಕೀಲಿಕೈ ಯಾವುದು? (ಯೋಬ 38:36, ಜ್ಞಾನೋಕ್ತಿ 2:6, ಯೂದ 1:5).

ಬ್ಯಾಬಿಲೋನಿನ ವಿಶ್ವವಿದ್ಯಾನಿಲಯದಲ್ಲಿ 3 ವರ್ಷಗಳ ತರಬೇತಿಯನ್ನು ಪಡೆದ ನಂತರ ಈ ಯೆಹೂದ್ಯರು ಪರೀಕ್ಷೆಗೆ ಒಳಪಡುವುದಕ್ಕಾಗಿ ರಾಜನ ಸನ್ನಿಧಾನಕ್ಕೆ ಕರೆಯಲ್ಪಟ್ಟರು. ಅವರು ಇತರರಿಗಿಂತ ಆರೋಗ್ಯವಾಗಿರುವುದು ಮಾತ್ರವಲ್ಲದೆ ಜ್ಞಾನದಲ್ಲೂ, ಬುದ್ಧಿಯಲ್ಲೂ ಎಲ್ಲರನ್ನೂ ಮೀರಿಸಿದರು. ಈ ನಾಲ್ವರು ಕೂಡಲೇ ರಾಜಸೇವೆಗೆ ನೇಮಿಸಲ್ಪಟ್ಟರು. ಈ ಜ್ಞಾನ ಮತ್ತು ತಿಳುವಳಿಕೆಯಲ್ಲಿ ಸಾಕಷ್ಟು ಪರಧಾರ್ಮಿಕತೆ ತುಂಬಿತ್ತು. ಅದರ ಮೇಲೆ ನಂಬಿಕೆಯಿಲ್ಲದಿದ್ದರೂ ಅವರು ಅದನ್ನು ಚೆನ್ನಾಗಿ ಕಲಿತರು. ಅವರು ಮಾಡಿದ ಸಾಧನೆಗೂ ಅರಮನೆಯ ಆಹಾರ ಮತ್ತು ತರಬೇತಿಗೂ ಸಂಬಂಧವಿದೆಯೆಂದು ನೆಬೂಕದ್ನೆಚ್ಚರನು ಅಂದುಕೊಂಡಿರಲೂಬಹುದು. ಏನೇ ಆಗಲಿ ದಾನಿಯೇಲ ಮತ್ತು ಆತನ ಸ್ನೇಹಿತರಿಗೂ ತಮ್ಮ ಜ್ಞಾನ ಬ್ಯಾಬಿಲೋನಿನ ವ್ಯವಸ್ಥೆಯಿಂದ ಬಂದಿದ್ದಲ್ಲವೆಂದು ಚೆನ್ನಾಗಿ ಗೊತ್ತಿತ್ತು. ಅದರಿಂದ ಬಂದಿದೆ ಎಂದು ಕಥೆಯೂ ಹೇಳುವುದಿಲ್ಲ.

ಸಮಸ್ತವೂ ದೇವರಿಂದಲೇ ಬರುತ್ತದೆ. ಯಾರು ಆತನಲ್ಲಿ ಭರವಸವಿಡುತ್ತಾರೋ ಅವರಿಗೆ ಏನೆಲ್ಲ ಮಾಡುತ್ತಾನೆಂಬುದಕ್ಕೆ ಇದು ಎಂಥಾ ಬಲಯುಕ್ತವಾದ ಉದಾಹರಣೆಯಾಗಿದೆ.

ನಾವು ದೇವರ ಮಕ್ಕಳೆಂಬ ಗುರುತನ್ನು ನಾಶಮಾಡುವ ಸರ್ಕಾರ, ಮಾಧ್ಯಮ ಮತ್ತು ಸಂಸ್ಥೆಗಳ ಅಗಾಧಶಕ್ತಿಗೆ ಭಯಪಡಬಾರದು. ನಾವು ನಮ್ಮ ವಿಶ್ವಾಸವನ್ನು ದೇವರ ಮೇಲೆ ಎಲ್ಲಾ ಕೇಡಿನಿಂದ ಸಂರಕ್ಷಿಸುತ್ತಾನೆಂದು ಭರವಿಸವಿಡಬಹುದು. ನಾವು ನಮ್ಮ ನಂಬಿಕೆಗೆ ಸವಾಲುಗಳನ್ನು ಎದುರಿಸುವಾಗ ಸರಿಯಾದ ಆಯ್ಕೆ ಮಾಡಬೇಕೆನ್ನುವುದೇ ಬಹಳ ಮುಖ್ಯವಾದದು.

ದಾನಿಯೇಲ 1ನೇ ಅಧ್ಯಾಯದೆಡೆಗೆ ನೋಡುವಾಗ ದೇವರ ವಿಷಯದಲ್ಲಿ ಕೆಲವು ಮುಖ್ಯವಾದ ಪಾಠಗಳನ್ನು ಕಲಿಯುತ್ತೇವೆ.

(1) ದೇವರು ಚರಿತ್ರೆಯನ್ನು ನಿಯಂತ್ರಿಸುತ್ತಾನೆ.

(2) ನಮ್ಮ ಸಮಾಜದಲ್ಲಿ ಮತ್ತು ಸಂಸ್ಕೃತಿಯಲ್ಲಿರುವ ದ್ವೇಷದ ಪರಿಸರವನ್ನು ದಾಟಿಹೋಗಲು ಬೇಕಾಗುವ ಜ್ಞಾನವನ್ನು ಕೊಡುತ್ತಾನೆ.

(3) ನಾವು ನಮ್ಮ ಜೀವನಶೈಲಿಯಲ್ಲಿ ಮತ್ತು ಆಂತರಿಕ ನಿರ್ಣಯಗಳಲ್ಲಿ ದೇವರ ಮೇಲೆ ಭರವಸೆ ಇಟ್ಟಾಗ ಆತನು ನಮ್ಮನ್ನು ಸನ್ಮಾನಿಸುತ್ತಾನೆ. ದಾನಿಯೇಲನು ಕೋರೇಷನ ಮೊದಲನೆಯ ವರುಷದವರೆಗೆ ಮುಂದುವರೆದನು ಎಂಬಲ್ಲಿಗೆ ಈ ಅಧ್ಯಾಯವು ಮುಕ್ತಾಯವಾಗುತ್ತದೆ (ದಾನಿ 1:21). 'ಕೋರೇಷ' ಎಂಬುದಾಗಿ ಇಲ್ಲಿ ಹೇಳಿರುವುದನ್ನು ಬಹಳ ಮಹತ್ವದ್ದಾಗಿದೆ. ಇದು ಗಡಿಪಾರಿನ ಮಧ್ಯೆಯೂ ನಿರೀಕ್ಷೆಯ ಕಿರುನೋಟವನ್ನು ನೀಡುತ್ತದೆ.

ತನ್ನ ಜನರನ್ನು ಬಿಡಿಸಿ ಯೆರೂಸಲೇಮಿಗೆ ಹಿಂದಿರುಗಿ ಹೋಗುವಂತೆ ಮಾಡಲು ದೇವರು ರಾಜನಾದ ಕೋರೇಷನನ್ನು ಆಯ್ಕೆ ಮಾಡಿದನು. ಅಧ್ಯಾಯದ ಆರಂಭದಲ್ಲಿ ಸೋಲು ಮತ್ತು ಗಡಿಪಾರು ಕಾಣಿಸಿಕೊಂಡರೂ ಇದು ನಿರೀಕ್ಷೆಯ ಮತ್ತು ಹಿಂದಿರುಗುವಿಕೆಯ ಕಿರುನೋಟದಲ್ಲಿ ಮುಕ್ತಾಯವಾಗುತ್ತದೆ. ನಮ್ಮ ಜೀವನದಲ್ಲಿ ದೊಡ್ಡ ಕಷ್ಟಗಳ ಸಂದರ್ಭ ಬಂದಾಗ್ಯೂ ಆತನು ಯಾವಾಗಲೂ ನಿರೀಕ್ಷೆಯ ಕಿಟಕಿಯನ್ನು ತೆರೆದು ಕಷ್ಟ ಮತ್ತು ನೋವುಗಳಾಚೆಗೆ ಮಹಿಮೆ ಮತ್ತು ಆನಂದವನ್ನು ನೋಡುವ ಹಾಗೆ ಮಾಡುತ್ತಾನೆ.

**ಶುಕ್ರವಾರ** **ಜನವರಿ 10**

**ಹೆಚ್ಚಿನ ಚಿಂತನೆಗೆ :** ದಾನಿಯೇಲನು ಮತ್ತು ಆತನ ಸ್ನೇಹಿತರು ಬ್ಯಾಬಿಲೋನಿನಲ್ಲಿರುವಾಗ ಯೌವನಸ್ಥರಾಗಿದ್ದರು. ಐಗುಪ್ತದೇಶದಲ್ಲಿ ಆರಂಭದ ವರ್ಷಗಳಲ್ಲಿ ಇದ್ದ ಯೋಸೇಫನಿಗಿಂತ ಉತ್ತಮನಾದ ಸ್ಥಿತಿಯಲ್ಲಿದ್ದರು. ಆದಾಗ್ಯೂ ಅವರು ಒಳಗಾದ ಶೋಧನೆ ಕಡಿಮೆಯಾಗಿರಲಿಲ್ಲ. ಅವರು ಯೂದಾಯದಲ್ಲಿದ್ದ ತಮ್ಮ ಸರಳವಾದ ಮನೆಗಳಿಂದ ಎಲ್ಲಾ ಪಟ್ಟಣಗಳಿಗಿಂತಲೂ ವೈಭವಯುತವಾದ

ಪಟ್ಟಣದಲ್ಲಿದ್ದ ಮಹಾಚಕ್ರವರ್ತಿಯ ಆಸ್ಥಾನಕ್ಕೆ ಒಯ್ಯಲ್ಪಟ್ಟರು. ರಾಜಸೇವೆ ಮಾಡುವುದಕ್ಕೆ ವಿಶೇಷ ತರಬೇತಿಗೆ ಆಯ್ಕೆಯಾದರು. ಭ್ರಷ್ಟತೆಯಿಂದ ತುಂಬಿದ ಐಷಾರಾಮಿ ಆಸ್ಥಾನದಲ್ಲಿ ಅವರು ಬಹಳ ಬಲವಾದ ಶೋಧನೆಗಳಿಂದ ಸುತ್ತುವರೆದಿದ್ದರು.

ಯೆಹೋವನ ಆರಾಧಕರಾಗಿದ್ದವರು ಬ್ಯಾಬಿಲೋನಿನಲ್ಲಿ ಸೆರೆಯಾಳುಗಳಾಗಿದ್ದಂತೆ ದೇವಾಲಯದ ಪಾತ್ರೆಗಳು ಬ್ಯಾಬಿಲೋನಿನ ದೇವರುಗಳ ಆಲಯದಲ್ಲಿ ಇಡಲ್ಪಟ್ಟವು. ಬ್ಯಾಬಿಲೋನಿನಲ್ಲಿ ಯೆಹೂದ್ಯರ ಅರಸನಾದವನೇ ಬಂಧಿಯಾಗಿದ್ದನು. ಅದರಿಂದ ತಮ್ಮ ಧರ್ಮ ಸಂಪ್ರದಾಯಗಳು ಯೆಹೂದ್ಯರಿಗಿಂತ ಶ್ರೇಷ್ಠವಾದವುಗಳೆಂದು ತಿಳಿಯುವುದಕ್ಕೆ ಅವರು ಗಳಿಸಿದ ವಿಜಯಗಳು ಸಾಕ್ಷಿಗಳಾಗಿದ್ದವು. ಅಂತಹ ಸನ್ನಿವೇಶಗಳಲ್ಲಿ ಇಸ್ರಾಯೇಲ್ಯರು ದೇವರ ಆಜ್ಞೆಗಳಿಂದ ದೂರವಾದುದರಿಂದ ಬಹಳ ಅವಮಾನಕರವಾದದ್ದನ್ನು ಆಹ್ವಾನಿಸಿಕೊಂಡಿದ್ದರು. ದೇವರು ತನ್ನ ಪಾರಮ್ಯತೆಯ ಮತ್ತು ವಿಧೇಯತೆಯ ಫಲಿತಾಂಶದ ಬಗ್ಗೆ ಆತನಿಗೆ ಅಗತ್ಯವಾದ ಪರಿಶುದ್ಧತೆಯ ಬಗ್ಗೆ ಬ್ಯಾಬಿಲೋನಿಯರಿಗೆ ಪುರಾವೆ ಒದಗಿಸಿದ್ದನು. ಇದನ್ನು ಮಾತ್ರ ಕೊಡಲು ಸಾಧ್ಯವೆಂಬಂತೆ, ಇನ್ನೂ ತಮ್ಮ ನಿಷ್ಠೆಗೆ ಭದ್ರವಾಗಿ ಅಂಟಿಕೊಂಡವರ ಮುಖಾಂತರ ಈ ಸಾಕ್ಷಿಯನ್ನು ಕೊಟ್ಟನು.

ಎಲೆನ್ ಜಿ ವೈಟಮ್ಮನವರ 'ಶಿಕ್ಷಣ' ಪುಸ್ತಕದಲ್ಲಿ 54ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಿಮ್ಮ ಸಮಾಜದಲ್ಲಿ ಕ್ರೈಸ್ತರಾದ ನೀವು ಎದುರಿಸುತ್ತಿರುವ ವಿವಿಧ ಸಾಂಸ್ಕೃತಿಕ ಮತ್ತು ಸಾಮಾಜಿಕ ಸವಾಲುಗಳ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ. ಅವುಗಳಾವುವು? ಸಭೆಯು ಇಡಿಯಾಗಿ ಅವುಗಳಿಗೆ ಹೇಗೆ ಪ್ರತಿಕ್ರಿಯೆ ತೋರಿಸಬಹುದು?

2. ದಾನಿಯೇಲನಿಗಾಗಲೇ ಇತರರಿಗಾಗಲೀ ತಮ್ಮ ನಂಬಿಕೆಯನ್ನು ಬಿಟ್ಟು ಬಿಡುವುದು ಎಷ್ಟು ಸುಲಭ ಯೋಚಿಸಿರಿ. ಏನೇ ಆಗಲಿ ಬ್ಯಾಬಿಲೋನಿಯರು ಗೆದ್ದವರಾಗಿದ್ದರು. ಯೆಹೂದ್ಯರು ಸೋತವರಾಗಿದ್ದರು. ಬ್ಯಾಬಿಲೋನಿಯರ ದೇವತೆಗಳು ಯೆಹೂದ್ಯರ ದೇವರಿಗಿಂತ ದೊಡ್ಡವುಗಳೆಂಬುದಕ್ಕೆ ಮತ್ತು

ದಾನಿಯೇಲ ಮತ್ತು ಆತನ ಸ್ನೇಹಿತರು ಈ ಸಂಗತಿಯನ್ನು ಒಪ್ಪಿಕೊಳ್ಳಲು ಇದಕ್ಕಿಂತ ದೊಡ್ಡ ಪುರಾವೆ ಯಾವುದಿದೆ? ಇಂತಹ ಸಂದರ್ಭದಲ್ಲಿ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ಸತ್ಯವೇದದಲ್ಲಿರುವ ಸತ್ಯಗಳಾವುವು? ಯೆರೆ 5:19 ಮತ್ತು 7:22–34ನ್ನು ನೋಡಿರಿ. ಇಂದಿನ ಸತ್ಯವನ್ನು ಅರ್ಥಮಾಡಿಕೊಳ್ಳಲು ಸತ್ಯವೇದವನ್ನು ತಿಳಿಯುವುದು ಎಷ್ಟು ಮುಖ್ಯ?

3. ನಮ್ಮ ನಂಬಿಗಸ್ತಿಕೆ ನಮಗೆ ಮಾತ್ರವಲ್ಲದೆ ನಮ್ಮ ನಂಬಿಗಸ್ತಿಕೆ ಯಾರಿಗೆ ನಾವು ಸೇವಿಸುವ ದೇವರ ಗುಣಸ್ವಭಾವದ ಬಗ್ಗೆ ಸಾಕ್ಷಿ ನೀಡುತ್ತದೋ ಅದಕ್ಕೆ ಮುಖ್ಯವಾಗಿದೆ ಏಕೆ?